# ಬರವಣಿಗೆ ಕೌಶಲದ ಅರ್ಥ, ವ್ಯಾಖ್ಯೆ, ಲಕ್ಷಣಗಳು

# ಬರವಣಿಗೆ

ಬರವಣಿಗೆ ಎನ್ನುವುದು ಮಾನವ ಸಂವಹನದ ಮಾಧ್ಯಮವಾಗಿದ್ದು, ಅದು ಲಿಖಿತ ಚಿಹ್ನೆಗಳನ್ನು ಹೊಂದಿರುವ ಭಾಷೆಯ ಪ್ರಾತಿನಿಧ್ಯವನ್ನು ಒಳಗೊಂಡಿರುತ್ತದೆ. ಬರವಣಿಗೆ ವ್ಯವಸ್ಥೆಗಳು ಸ್ವತಃ ಮಾನವ ಭಾಷೆಗಳಲ್ಲ, ಅವು ಭಾಷೆಯನ್ನು ಸಮಯ ಅಥವಾ ಸ್ಥಳದಿಂದ ಬೇರ್ಪಡಿಸಿದ ಇತರ ಮಾನವರು ಪುನರ್ನಿರ್ಮಿಸಬಹುದಾದ ರೂಪಕ್ಕೆ ನಿರೂಪಿಸುವ ಸಾಧನಗಳಾಗಿವೆ.

# ಬರವಣಿಗೆ ಕೌಶಲ

ಭಾಷೆಯಲ್ಲಿ ಅಭಿವ್ಯಕ್ತಿಗೆ ವಿಶೇಷ ಸ್ಥಾನವಿದೆ. ಶಬ್ದ ಮತ್ತು ವಾಕ್ಯಗಳ ಮೂಲಕ ಮಾತುಗಾರಿಕೆಯಾದರೆ, ನಿರ್ದಿಷ್ಟ ಲಿಪಿಗಳಿಂದ ಕೂಡಿದ ಬರಹದ ಮೂಲಕ ಬರವಣಿಗೆ ಅಭಿವ್ಯಕ್ತವಾಗುವುದು. ಇಲ್ಲಿ ಮೂರು ಕೌಶಲಗಳ ಸಂಗಮವಾಗುತ್ತದೆ. ಕೈ ಬರಹದಲ್ಲಿ ಸಾಮಾನ್ಯವಾಗಿ ಕಣ್ಣು, ಮನಸ್ಸು, ಮತ್ತು ಕೈ ಬೆರಳುಗಳು ಸಮನ್ವಯಗೊಂಡಿರುತ್ತದೆ.

**'ಖಡ್ಗಕ್ಕಿಂತ ಲೇಖನಿ ಹರಿತ'** ಎಂಬ ಮಾತು ಜನಜನಿತವಾಗಿದೆ. ಮಾತಿನ ಮೂಲಕ ಹೆಚ್ಚು ಪರಿಣಾಮವಾಗಲಾರದು ಆದರೆ, ಬರವಣಿಗೆಯ ಮೂಲಕ ನಿಂದಿಸುವುದು ಹೆಚ್ಚು ಅಪಾಯಕಾರಿ. 'ಎಲ್ಲರೂ ಬರೆಯುವುದಿಲ್ಲ, ಹೆಚ್ಚು ಬರೆಯುವವರು ಕಡಿಮೆ ಮಾತನಾಡುತ್ತಾರೆ.

## ಬರವಣಿಗೆ ಅರ್ಥ

- ‘ಅಕ್ಷರಗಳ ಉಚ್ಚಾರಣೆಗೆ ತಕ್ಕಂತೆ ಹೊಂದಿಕೆಯಾಗುವ ಲಿಪಿಯನ್ನು ಜೋಡಿಸುವುದನ್ನೆ ಬರವಣಿಗೆ’ ಎನ್ನಬಹುದು.
- ವ್ಯಕ್ತಿ ಒಂದು ನಿರ್ದಿಷ್ಟ ವಿಷಯ ಕುರಿತು ಆಲೋಚಿಸಿದ ಭಾವನೆಗಳನ್ನು ಅಕ್ಷರ, ಪದ, ವಾಕ್ಯಗಳ ಮೂಲಕ ಲಿಖಿತ ರೂಪದಲ್ಲಿ ಹೊರಗೆಡುವುದೇ ಬರವಣಿಗೆ.
- ವ್ಯಕ್ತಿ ತನ್ನ ಭಾವನೆಗಳನ್ನು ಕೈಯ ಸ್ನಾಯುಗಳ ಮೂಲಕ ನಿರ್ದಿಷ್ಟ ಅಕ್ಷರ ಸಂಕೇತಗಳ ಸಹಾಯದಿಂದ ವ್ಯಕ್ತಪಡಿಸುವುದೇ ಬರವಣಿಗೆ
- **ಶಿಕ್ಷಣಶಾಸ್ತ್ರ ಪಾರಿಭಾಷಿಕ ನಿಘಂಟು** :– “ ಸೂಕ್ತ ರೀತಿಯ ಯಾವುದಾದರೂ ಉಪಕರಣವನ್ನು ಬಳಸಿಕೊಂಡು ಓದಬೇಕಾದ ಅಂಶವನ್ನು ಕೈಯಿಂದ ಗುರುತಿಸುವ ಕಾರ್ಯವೇ ಬರವಣಿಗೆ ಅಥವಾ ಲೇಖನ”

## ಬರವಣಿಗೆ ಕೌಶಲ್ಯ ಏಕೆ ಬೇಕು?

ಬರವಣಿಗೆ ಅತ್ಯಗತ್ಯ ಉದ್ಯೋಗ ಕೌಶಲ್ಯ. ಬರವಣಿಗೆ ಎನ್ನುವುದು ಒಬ್ಬರ ಕೆಲಸ, ಕಲಿಕೆ ಮತ್ತು ಬುದ್ಧಿಶಕ್ತಿಯನ್ನು ನಿರ್ಣಯಿಸುವ ಪ್ರಾಥಮಿಕ ಆಧಾರವಾಗಿದೆ. ಕಾಲೇಜಿನಲ್ಲಿ, ಕೆಲಸದ ಸ್ಥಳದಲ್ಲಿ, ಸಮುದಾಯದಲ್ಲಿ ಇತ್ಯಾದಿ.

ಬರವಣಿಗೆ ಕೌಶಲ್ಯ ನಮ್ಮನ್ನು ಸಜ್ಜುಗೊಳಿಸುತ್ತದೆ. ನಮ್ಮ ಆಲೋಚನೆ ಮತ್ತು ಕಲಿಕೆಯನ್ನು ಗೋಚರಿಸುವ ಮತ್ತು ಶಾಶ್ವತಗೊಳಿಸುತ್ತದೆ.

## ಬರವಣಿಗೆ ಕುರಿತಾದ ಹೇಳಿಕೆಗಳು

- ಬರೆಯಲು ಬಯಸುವ ಪುಸ್ತಕವನ್ನು ನೀವು ಬರೆಯಬೇಕು.
- ಒಂದೋ ಓದಲು ಯೋಗ್ಯವಾದದ್ದನ್ನು ಬರೆಯಿರಿ ಅಥವಾ ಬರೆಯಲು ಯೋಗ್ಯವಾದದ್ದನ್ನು ಮಾಡಿ.
- ನೀವು ಬದುಕಲು ನಿಂತಿಲ್ಲದಿದ್ದಾಗ ಬರೆಯಲು, ಕುಳಿತುಕೊಳ್ಳುವುದು ಎಷ್ಟು ವ್ಯರ್ಥ.
- ನಾನು ಯಾವಾಗಲೂ ಎರಡು ಪುಸ್ತಕಗಳನ್ನು ನನ್ನ ಜೇಬಿನಲ್ಲಿ ಇಟ್ಟುಕೊಂಡಿದ್ದೇನೆ, ಒಂದು ಓದಲು, ಒಂದು ಬರೆಯಲು.

## ಉತ್ತಮ ಕೈಬರಹದ ಲಕ್ಷಣಗಳು

- **ಸುಸ್ಪಷ್ಟತೆ :** ಅಕ್ಷರಗಳನ್ನು ಬಿಡಿ ಬಿಡಿಯಾಗಿ ಅಂದವಾಗಿ ಬರೆಯಬೇಕು. ಅವು ಸ್ವರೂಪವನ್ನು ಕಳೆದುಕೊಂಡು ಬೇರೆ ಅಕ್ಷರವನ್ನಾಗಿ ಭ್ರಮಿಸಲು ಅವಕಾಶವಿರಬಾರದು. ಒಂದೆ ಸರದಲ್ಲಿ ಮುತ್ತು ಪೋಣಿಸಿದಂತಿರಬೇಕು.
- **ಗಾತ್ರ :** ಅಕ್ಷರಗಳು ತೀರಾ ದೊಡ್ಡದಾಗಿ ಅಥವಾ ತೀರ ಚಿಕ್ಕದಾಗಿ ನೋಡಿದ ಕೂಡಲೇ ಗ್ರಹಿಸಲು ಸಾಧ್ಯವಾದಷ್ಟು ಗಾತ್ರವನ್ನು ಹೊಂದಿರಬೇಕು. ಅಕ್ಷರಗಳು ಒಂದೇ ಪ್ರಮಾಣದಲ್ಲಿರಬೇಕು. ಅಕ್ಷರಗಳೊಂದಿಗೆ ಸಂಯೋಜಿತವಾಗುವ ಒತ್ತು, ಕಾಗುಣಿತ ಚಿಹ್ನೆಗಳು ಸಾಮರಸ್ಯ ಪಡೆದಿರಬೇಕು.
- **ಅಂತರ :** ಪದ ಪದಗಳ ನಡುವೆ ಅಂತರವಿರಬೇಕು. ಹಾಗೆಯೇ ಸಾಲು–ಸಾಲಾಗಿ ಸಮಾನಾಂತರವಿರಬೇಕು.

## ಉತ್ತಮ ಕೈಬರಹದ ಲಕ್ಷಣಗಳು

- **ಲೇಖನ ಚಿಹ್ನೆ :** ಲೇಖನ ಚಿಹ್ನೆಗಳನ್ನು ಅರ್ಥವತ್ತಾಗಿ ಬಳಸಬೇಕು. ವ್ಯತ್ಯಸ್ತ ಬಳಕೆಯಿಂದ ಪ್ರಮಾದವಾಗುವ ಸಂಭವವುಂಟು.
- **ವೇಗ :** ಅಂದವಾಗಿ ಬರೆಯುವಾಗ ವೇಗವಾಗಿಯೂ, ನಿಖರವಾಗಿ, ಅಂದವಾಗಿ ಬರೆಯುವ ಅಭ್ಯಾಸವನ್ನು ಮಕ್ಕಳಿಗೆ ಮಾಡಿಸಬೇಕು. ಬರೆಯುವುದರ ಕಡೆಗೆ ಆಸಕ್ತಿ ನೀಡುತ್ತಾ ನಂತರ ಬರಹದಲ್ಲಿ ವೇಗವನ್ನು ವೃದ್ಧಿಸಬೇಕು.
- **ಸ್ಥಿರತೆ :** ಬರವಣಿಗೆಯು ಸಾಲುಗಳು, ಪುಟಕ್ಕೂ ವ್ಯತ್ಯಾಸವಾಗಬಾರದು. ಕನ್ನಡದ ಅಕ್ಷರಗಳನ್ನು ಬಾಗಿಸಿ ಬರೆಯದೇ ನೇರವಾಗಿ ಬರೆಯಬೇಕು ಕನ್ನಡ ಅಕ್ಷರಕ್ಕೆ ಇರುವುದು ನೆಟ್ಟನೆಯ ನಿಲುವು.

## ಉತ್ತಮ ಕೈಬರಹದ ಲಕ್ಷಣಗಳು

- ಬರವಣಿಗೆ ಔಚಿತ್ಯಪೂರ್ಣವಾಗಿರಬೇಕು.
- ರಸಸ್ವಾದನೆಯನ್ನು ಉಂಟುಮಾಡಬೇಕು.
- ಒಮ್ಮೆ ಬರೆದ ಸಾಲುಗಳನ್ನು ಪುನಃ ಪುನಃ ತಿದ್ದಬಾರದು.
- ಹಾಳೆಯ ಎಡಬದಿಯಲ್ಲಿ ನಿರ್ದಿಷ್ಟಪಡಿಸಿದ ಜಾಗವನ್ನು ಬಿಡಬೇಕು.
- ವ್ಯಾಕರಣ ನಿಯಮಗಳಿಗೆ ಅನುಗುಣವಾಗಿರಬೇಕು.
- ಬರವಣಿಗೆ ಓದುಗರಿಗೆ ಸಮೀಪವಾಗುವಂತೆ ಅತ್ಯಂತ ಸರಳವಾಗಿರಬೇಕು.
- ಪ್ರತಿಯೊಬ್ಬರ ಮನಸ್ಸಿಗೆ ಹಿಡಿಸುವಂತಿರಬೇಕು.

## ಬರವಣಿಗೆಯ ಮಹತ್ವ

ಬರವಣಿಗೆಯೂ ಮಾನವನ ಆವಿಷ್ಕಾರಗಳಲ್ಲೊಂದು ಬರವಣಿಗೆ ಇಲ್ಲದ ಭಾಷೆಗಳು ಅಸ್ತಿತ್ವದಲ್ಲಿದ್ದರೂ ಅವುಗಳ ಉಳಿವು ಅನಿಶ್ಚಿತ. ಭಾಷೆ ಕಾಲ ಮತ್ತು ದೂರವನ್ನು ಜಯಿಸಿ ನಿಂತಿರುವುದು ತನ್ನ ಬರವಣಿಗೆಯಿಂದಲೇ. ಮಾತು ಕಲಿತ ಮನುಷ್ಯ ಮಾನವನಾದನು. ಬರವಣಿಗೆ ಕಲಿತನ ಮಾನವನು ನಾಗರಿಕನಾದವನು.

- ಬರವಣಿಗೆ ವ್ಯಕ್ತಿಯನ್ನು ಉತ್ತಮ ಬರಹಗಾರನನ್ನಾಗಿ ಮಾಡುತ್ತದೆ.

ಪ್ರಾರಂಭದಲ್ಲಿ ಬರವಣಿಗೆ ಅನೇಕ ದೋಷಗಳುಂಟಾಗುತ್ತವೆ. ಸತತ ಬರವಣಿಗೆಯಿಂದ ಸ್ನಾಯುಗಳು ಗಟ್ಟಿಯಾಗುತ್ತವೆ. ಬರಹದ ರೀತಿ–ನೀತಿಗಳು ತಿಳಿದು ಬರಹದ ಕೌಶಲ್ಯ ರೂಢಿಗತವಾಗಿ ಬರಹದ ಗುಣಗಳು ಮೇಳೈಸುತ್ತವೆ.

- **ಬರವಣಿಗೆ ನಾಗರಿಕತೆಯ ಪ್ರತಿಬಿಂಬ**

ಮಾತು ಕಲಿತ ಮನುಷ್ಯ ಮಾನವನಾದ, ಬರವಣಿಗೆ ಕಲಿತ ಮಾನವನು ನಾಗರಿಕನಾದನು. ತಾಳೆಗರಿಗಳಲ್ಲಿ, ಶಾಸನಗಳಲ್ಲಿ ಬರಹದ ರೂಪವೂ ಒಂದು ರೀತಿಯಲ್ಲಿದ್ದರೆ, ಅಕ್ಷರಗಳ ಸ್ವರೂಪ ಬರವಣಿಗೆಯಲ್ಲಿ ಮಾರ್ಪಾಡಾಗಿರುವುದನ್ನು ಗಮನಿಸಬಹುದು.

- **ಬರವಣಿಗೆಯಿಂದ ಸ್ಮರಣ ಶಕ್ತಿ ಹೆಚ್ಚುತ್ತದೆ.**

ಬರೆಯದೆ ಓದುವವನು
ಕರೆಯದೆ ಬರುವವನು
ಬರಿಗಾಲಲ್ಲಿ ನಡೆಯುವವ
ಕರೆದು ಕೆರದಲ್ಲಿ ಹೊಡೆಯೆಂದ ಸರ್ವಜ್ಞ

“ಹತ್ತು ಬಾರಿ ಓದುವ ಬದಲು ಒಂದು ಬಾರಿ ಬರೆಯುವುದು ಲೇಸು” ಬರೆಯುವಾಗ ಮನಸ್ಸು ಕೇಂದ್ರೀಕರಿಸುವುದರ ಮೂಲಕ ವಿಷಯವನ್ನು ಪ್ರಸ್ತುತಪಡಿಸುವುದು. ಒಮ್ಮೆ ಬರೆಯಲ್ಪಟ್ಟ ವಿಷಯವು ಸ್ಮೃತಿಪಟಲದಲ್ಲಿ ದೀರ್ಘಕಾಲದವರೆಗೆ ಉಳಿಯುತ್ತದೆ.

ಓದಿದಂತೆ ಬರೆಯುವುದರಿಂದ ಮತ್ತು ಬರೆದಂತೆ ಓದುವುದರಿಂದ ವಿಷಯವು ಮನಸ್ಸಿನಲ್ಲಿ ಅಚ್ಚಳಿಯದೆ ಉಳಿಯುವುದು. ಮಾತು ಮತ್ತು ಓದುಗಾರಿಕೆಯು ಪರಿಣಾಮಕಾರಿಯಾಗಿ ಫಲ ಕೊಡಬೇಕಾದರೆ ಬರವಣಿಗೆಯ ಅಭ್ಯಾಸವಿರಬೇಕು.

• **ಬರಹವು ವ್ಯವಹಾರ ಮಾಧ್ಯಮವಾಗಿ ಪಾತ್ರವಹಿಸುತ್ತದೆ.**

ನಿತ್ಯ ಜೀವನದಲ್ಲಿ ಆಡಳಿತ ವ್ಯವಹಾರಗಳು ಪತ್ರ ಲೇಖನಗಳಿಂದ ಸ್ವತಂತ್ರವಾಗಿ ನಿರ್ವಹಿಸಲು ಸಾಧ್ಯ. ನಮ್ಮವರೊಂದಿಗೆ ಪರಸ್ಪರ ವಿಚಾರ, ಅನುಭವ–ಅನಿಸಿಕೆ, ಸುಖ–ದುಃಖ, ವ್ಯಕ್ತಪಡಿಸಲು ಬರವಣಿಗೆಯ ಮೊರೆಹೋಗುತ್ತೇವೆ. ರಾಜ್ಯ, ರಾಷ್ಟ್ರ, ಅಂತರರಾಷ್ಟ್ರಗಳೊಂದಿಗಿನ ಸಂಬಂಧ ಕಲ್ಪಿಸಬಹುದಾಗಿದೆ.

ಆಧುನಿಕ ಜಗತ್ತಿನ ಮಾನವನ ಎಲ್ಲ ವ್ಯವಹಾರಗಳಲ್ಲೂ ಬರವಣಿಗೆ ಪ್ರಮುಖ ಪಾತ್ರ ವಹಿಸುತ್ತದೆ.

- **ಬರಹ ಮನೋಸ್ಥೈರ್ಯ, ವಿವೇಚನೆ, ಜ್ಞಾನಾರ್ಜನೆಗೆ ಸಹಾಯಕವಾಗುತ್ತದೆ.**

ವಿಷಯ ಸಂಗ್ರಹಣೆಗೆ, ವಿಷಯ ಅಭ್ಯಾಸಗಳಿಗೆ, ಜ್ಞಾನಾರ್ಜನೆಗೆ, ಸೃಜನಶೀಲ ಅಭ್ಯಾಸಗಳಿಗೆ, ವಿವೇಚನೆ, ಆಲೋಚನೆ ಮತ್ತು ಭಾವನೆಗಳ ಅಭಿವ್ಯಕ್ತತೆಗೆ, ವಿಷಯ ದಾಖಲೆಗಳಿಗೆ ಬರವಣಿಗೆಯು ಉತ್ತಮ ಸಾಧನವಾಗಿದೆ.

- **ಉತ್ತಮ ಬರವಣಿಗೆಯು ವ್ಯಕ್ತಿತ್ವ ಪೋಷಣೆಗೆ ಸಹಾಯಕವಾಗುತ್ತದೆ.**

ಹಲವು ವಿಚಾರಗಳ ಬಗೆಗೆ ವಿವಿಧ ರೀತಿ ಬರವಣಿಗೆಗಳನ್ನು ಅಭ್ಯಾಸ ಮಾಡುವುದರಿಂದ ವ್ಯಕ್ತಿಯು ಬೌದ್ಧಿಕವಾಗಿ ತುಂಬಾ ಎತ್ತರಕ್ಕೆ ಬೆಳೆಯಬಹುದು. ಆತ್ಮ ವಿಶ್ವಾಸವನ್ನು ತಂದುಕೊಡುತ್ತದೆ.

- **ಸಾಹಿತ್ಯ ಸೃಷ್ಟಿ, ಅಧ್ಯಯನ ಮತ್ತು ಸಾಹಿತ್ಯ ಪ್ರಸಾರಕ್ಕೆ ಸಹಾಯಕವಾಗುತ್ತದೆ.**

- ಸಾಹಿತ್ಯ ಸೃಷ್ಟಿ, ಅಧ್ಯಯನ  ಮತ್ತು ಸಾಹಿತ್ಯ ಪ್ರಸಾರಕ್ಕೆ ಸಹಾಯಕವಾಗುತ್ತದೆ.
- ಸಂಸ್ಕೃತಿ ವಿಕಾಸ ಹಾಗು ಪ್ರಸಾರಕ್ಕೆ ಪೂರಕವಾಗುತ್ತದೆ.
- ಮಾನವ ಇತಿಹಾಸದ ಶ್ರೀಮಂತ ಪರಂಪರೆ ಮತ್ತು ಅಪರಿಮಿತ
- ಜ್ಞಾನರಾಶಿಯನ್ನು ಎಲ್ಲರಿಗೂ ಎಲ್ಲ ಕಾರ್ಯಕ್ಕೂ ಲಭ್ಯವಾಗುವಂತೆ
- ಅವಿಚ್ಛಿನ್ನವಾಗಿ ಸಾಗಿಸುವ ಕಾರ್ಯ ಬರವಣಿಗೆಯಿಂದಲೇ ಸಾಗುತ್ತದೆ.
- ವಿಮರ್ಶಾತ್ಮಕ ಮನೋಭಾವನೆ ಮತ್ತು ಆಲೋಚನಾ ಪ್ರವೃತ್ತಿ ಬೆಳೆಸುವುದು.
- ವಿಷಯ ಸಂಗ್ರಹಣೆ ಮತ್ತು ವಿಸ್ತೃತ ಅಧ್ಯಯನಕ್ಕೆ ಅವಕಾಶ ನೀಡುವುದು.

## ❖ ಕನ್ನಡ ಬರಹದ ವೈಶಿಷ್ಟ್ಯತೆಗಳು

- ಅರ್ಕಾವೊತ್ತು (ꣳ)
- ದೀರ್ಘ (ೀ)
- ಶಕಟರೇಫ

## ❖ ಕನ್ನಡ ಲಿಪಿಯ ಗುಣಲಕ್ಷಣಗಳು

- ನಮ್ಮ ಭಾಷೆ ಧ್ವನಿಯುಕ್ತವಾದುದಾಗಿದ್ದು, ಹೇಳಿದಂತೆ ಬರೆಯುತ್ತೇವೆ ಬರೆದಂತೆ ಹೇಳುತ್ತೇವೆ.
- ಕನ್ನಡ ಅಕ್ಷರಗಳು ವೃತ್ತ (0), ಅರ್ಧವೃತ್ತ, ಉದ್ದ ಗೆರೆ, ಮೊದಲಾದ ರೇಖಾ ವಿನ್ಯಾಸಗಳಿಂದ ರಚಿತವಾಗಿದೆ.

- ಕನ್ನಡ ಲಿಪಿಯಲ್ಲಿ ಪ್ರಮುಖವಾಗಿ ಸ್ವರ, ವ್ಯಂಜನ ಹಾಗೂ ಯೋಗವಾಹಗಳನ್ನು ಕಾಣಬಹುದು.
- ಕನ್ನಡ ಬರವಣಿಗೆಯಲ್ಲಿ ಏಕರೂಪದ ಒತ್ತಕ್ಷರಗಳಿಲ್ಲ ಹಾಗೂ ಎರಡು ಬಗೆಯ ಸಜಾತಿಯ ಹಾಗೂ ವಿಜಾತಿಯ ಒತ್ತಕ್ಷರಗಳು.
- ಇಂಗ್ಲೀಷಿನಂತೆ ಕನ್ನಡದಲ್ಲಿ ಲಿಪಿಗಳ ವ್ಯತ್ಯಾಸವಿರದು. ಯಾವಾಗಲೂ ಏಕರೂಪತೆಯನ್ನು ಮತ್ತು ಅಂದದ ಬರಹವು ಹೊಂದಿರುವುವು.
- ಕನ್ನಡದಲ್ಲಿ ಇಂಗ್ಲೀಷ್‌ನಂತೆ ದೊಡ್ಡ ಹಾಗೂ ಸಣ್ಣ ಅಕ್ಷರಗಳಿಲ್ಲದೇ ಏಕರೂಪವಾಗಿರುತ್ತದೆ.

- ಕನ್ನಡದಲ್ಲಿ ಅಕ್ಷರಗಳನ್ನು ಬರೆದಂತೆ ಉಚ್ಛರಿಸುತ್ತೇವೆ. ಇಂಗ್ಲೀಷ್‌ನಲ್ಲಿ ಕೆಲ ಅಕ್ಷರಗಳನ್ನು ಸೈಲೆಂಟ್ ಎಂದು ಕರೆಯುವರು. ಉದಾ :
- ಅನುಸ್ವಾರ ಮತ್ತು ವಿಸರ್ಗಗಳನ್ನು ಸ್ವತಂತ್ರವಾಗಿ ಉಚ್ಛಾರಣೆ ಮಾಡಲು ಆಗುವುದಿಲ್ಲ. ಇವುಗಳನ್ನು ಸ್ವತಂತ್ರವಾಗಿ ಉಚ್ಛರಿಸಿದರೆ ಅರ್ಥ ಬರುವುದಿಲ್ಲ ಅಕ್ಷರಗಳ ಜೊತೆ ಮಾತ್ರ ಬೆಲೆಯಿರುತ್ತದೆ.

  ಉದಾ : ಅಂಗಡಿ, ಅಂಜೂರ, ಅಂಬರ, ಅಂದ

  ದುಃಖ, ನಹಿಃ, ಅಂತಃಕರಣ, ಮನಃಪೂರ್ವಕ

# ಕೈ ಬರಹದ ದೋಷಗಳು

- **ಅಕ್ಷರ ರಚನಾ ವಿನ್ಯಾಸದಲ್ಲಿ ಕಂಡುಬರುವ ದೋಷಗಳು**
  - ಅಕ್ಷರದ ರೇಖಾ ವಿನ್ಯಾಸವನ್ನು ಅಸ್ಪಷ್ಟವಾಗಿ ಬರೆಯುವುದು
  - ಅಕ್ಷರಗಳನ್ನು ಓರೆಯಾಗಿ ಬರೆಯುವುದು
  - ಅಕ್ಷರಗಳಿಗೆ ತಲೆಕಟ್ಟನ್ನು ಹಾಕಿದರೂ ಸರಿಯಾಗಿ ಹಾಕದಿರುವುದು
  - ಒತ್ತಕ್ಷರಗಳನ್ನು ತಪ್ಪಾಗಿ ಹಾಕುವುದು.
- **ಅಕ್ಷರ ಮತ್ತು ಪದ ಜೋಡಣೆಯಲ್ಲಿ ಕಂಡುಬರುವ ದೋಷಗಳು**
  - ಮೂಲ ರೂಪಕ್ಕನುಗುಣವಾಗಿ ಅಕ್ಷರವನ್ನು ಬರೆಯುವುದು
  - ಅಕ್ಷರಗಳನ್ನು ಒತ್ತೊತ್ತಾಗಿ ಬರೆಯುವುದು
  - ಅಕ್ಷರ ಹಾಗು ಪದಗಳ ನಡುವೆ ಅಂತರ ಕಾಯ್ದುಕೊಳ್ಳದಿರುವುದು
  - ಅಕ್ಷರ/ಪದಗಳನ್ನು ಅನಗತ್ಯವಾಗಿ ಬಿಂಗಡಿಸಿ ಬರೆಯುವುದು

- **ಕಾಗುಣಿತದಲ್ಲಿ ಕಂಡುಬರುವ ದೋಷಗಳು**

ಅರ್ಥಪೂರ್ಣ ಬರವಣಿಗೆಗೆ ಕಾಗುಣಿತಗಳೇ ಮೂಲಾಧಾರ. 'ರೈಲು ಹಳಿ ತಪ್ಪಿದರೆ ಹೇಗೆ ಅನಾಹುತ ಸಂಭವಿಸುತ್ತದೆಯೋ ಹಾಗೆಯೇ ಕಾಗುಣಿತ ಜ್ಞಾನವಿಲ್ಲದೆ ಬರೆದರೆ ಭಾಷೆಯ ಅರ್ಥ ಕೆಡುವುದು' ಉದಾ : ಚಿಹ್ನೆಗಳು, ಅಲ್ಪಪ್ರಾಣ, ಮಹಾಪ್ರಾಣ, ಸಂಯುಕ್ತಾಕ್ಷರಗಳು ಹಾಗೆಯೇ ಅಹ, ಶ, ಷ, ಸ, ಳ, ಲ, ನ, ಣ ಹೀಗೆ ಮುಂತಾದ ಅಕ್ಷರಗಳಲ್ಲಿ ಸ್ಪಷ್ಟತೆ ಇಲ್ಲದಿದ್ದರೆ ಆ ಭಾಷೆಯ ಸಂಪೂರ್ಣ ಅರ್ಥವೇ ದ್ವಂದ್ವಾರ್ಥವಾಗುತ್ತದೆ.

- **ಲೇಖನ ಚಿಹ್ನೆಗಳನ್ನು ಹಾಕುವುದರಲ್ಲಿ ಕಂಡುಬರುವ ದೋಷಗಳು**
  - ಅನಗತ್ಯಕಡೆ ಲೇಖನ ಚಿಹ್ನೆಗಳನ್ನು ಬಳಸುವುದು
  - ಸಂದರ್ಭ, ಸನ್ನಿವೇಶ, ಬರವಣಿಗೆ ಶೈಲಿಯನ್ನಾಧರಿಸಿ ಚಿಹ್ನೆಗಳನ್ನು ಬಳಸಬೇಕು
  - ಲೇಖನ ಚಿಹ್ನೆಗಳ ಸ್ಪಷ್ಟ ಅರಿವು ಇಲ್ಲದಿರುವುದು.

- ವಾಕ್ಯ ರಚನೆ ಮತ್ತು ವಾಕ್ಯ ವೃಂದದ ರಚನೆಯಲ್ಲಿ ಆಗುವ ದೋಷಗಳು
- ಮಾನಸಿಕ ಮತ್ತು ಸ್ನಾಯುಗಳ ಸರಿಯಾದ ಹೊಂದಾಣಿಕೆ ಇಲ್ಲದಿರುವುದು.
- ಭಾಷಾ ಬೋಧಕನ ನಿರಾಸಕ್ತಿ- ಕಾಗುಣಿತ ಜ್ಞಾನದ ಕೊರತೆ
- ವಿದ್ಯಾರ್ಥಿಗಳಿಗೆ ಬರಹದ ರೂಢಿಯಿಲ್ಲದೆ ತಾತ್ಸಾರದಿಂದ ಬರೆಯುವುದು.
- ಕಾಗುಣಿತವನ್ನು ಬಗೆಗೆ ತಿಳುವಳಿಕೆ ಮತ್ತು ಸ್ಮರಣಶಕ್ತಿ ಇಲ್ಲದಿರುವುದು.

## ಬರವಣಿಗೆಯನ್ನು ಸುಧಾರಿಸುವ ಕ್ರಮಗಳು

1. ಬರವಣಿಗೆಯ ರೇಖಾ ವಿನ್ಯಾಸವನ್ನು ರೂಡಿಸುವುದು
2. ಅಕ್ಷರಗಳಿಗೆ ತಲೆಕಟ್ಟು, ಒತ್ತಕ್ಷರಗಳ ಜ್ಞಾನವನ್ನು ನೀಡುವುದು.
3. ಮಾದರಿ ಬರವಣಿಗೆಯನ್ನು ಪರಿಚಯ ಮಾಡಿಕೊಡುವುದು.
4. ಉಕ್ತಲೇಖನ, ನೋಡಿ ಬರೆಯಲು ಹೇಳುವುದು.
5. ಕಾಗುಣಿತವಿರುವ ವಾಕ್ಯಗಳನ್ನು ಸ್ಲೇಟಿನ ಮೇಲೆ ಬರೆಯಲು ಪ್ರೇರೇಪಿಸುವುದು
6. ಸ್ನಾಯು ಮತ್ತು ಮಾನಸಿಕ ಕಾರ್ಯಗಳ ಹೊಂದಾಣಿಕೆ ಏರ್ಪಡಿಸುವುದು
7. ನೋಡಿ ಬರೆ, ಕೇಳಿ ಬರಹ, ಇತ್ಯಾದಿ ರೂಢಿಗಳನ್ನು ಮಕ್ಕಳಿಗೆ ಮಾಡಿಸುವುದು
8. ವರ್ಣವಿನ್ಯಾಸ, ಅರ್ಥವನ್ನು ತಿಳಿದು ಬರೆಯಲು ತಿಳಿಸುವುದು
9. ಅಕ್ಷರ ಮತ್ತು ಅಕ್ಷರ ಜೋಡಣೆಯನ್ನು ಅರ್ಥೈಸುವುದು
10. ವ್ಯಾಕರಣ ಹಾಗೂ ಅಲಂಕಾರಗಳ ಜ್ಞಾನವನ್ನು ನೀಡುವುದು

## ಬರವಣಿಗೆಯನ್ನು ಸುಧಾರಿಸುವ ಕ್ರಮಗಳು

1. ಕಾಪಿ ಬರೆಸುವುದು (ನಕಲು ಬರಹ)
2. ನೋಡಿ ಬರೆಯುವುದು
3. ಉಕ್ತಲೇಖನ (ಕೇಳಿ ಬರಹ)
4. ಕ್ರೀಡಾ ಪದ್ಧತಿ